ಹೇಳಬೇಕು'' ನಾಯರ್ ಪೀಠಿಕೆ ಹಾಕಿದರು. ಅವಳು ಮುಗುಳ್ನಕ್ಕಳು.

''ನಿಜನೇ ಹೇಳಬೇಕು'' ರಾಮನ್ ಕುಟ್ಟಿ ನಾಯರ್ ಮತ್ತೆ ಹೇಳಿದರು.

''ಸರಿ ಯಜಮಾನರೆ, ನಿಮಗೆ ಈಗ ಏನು ಬೇಕು ಹೇಳಿ.''

''ನನಗೇನೂ ಬೇಡ, ನನಗೊಂದು ವಿಷಯ ಗೊತ್ತಾಗಬೇಕು. ರವಿ ನಿನಗೇನಾದರೂ ಮೋಸ ಮಾಡಿದ್ನಾ? ನೀನು ಈಗ ಬಸುರಿಯಾ?'' ಅವಳು ಮತ್ತೆ ನಕ್ಕಳು.

''ಯಜಮಾನರೇ, ನಾನು ಹೇಗೆ ಬಸರಿಯಾಗ್ತೀನಿ, ನನಗೆ ಮದುವೇನೆ ಆಗಿಲ್ಲವಲ್ಲ. ಆದರೆ, ನಿಮ್ಮ ಹೆಂಡತಿ ಬಸುರಿಯಾಗಿದ್ದಾರೆ. ಅವರು ಆಗಾಗ ವಾಂತಿ ಮಾಡ್ತಿರ್ತಾರೆ.''

ರಾಮನ್ ಕುಟ್ಟಿ ನಾಯರ್ ಆಶ್ಚರ್ಯಭರಿತರಾದರು. ಮದುವೆಯಾಗಿ ಇಪ್ಪತ್ತೈದು ವರ್ಷಗಳ ಕಾಲ ಬಸುರಿಯಾಗದವಳು ಈಗ ತಾನು ಬ್ರಹ್ಮಚರ್ಯವನ್ನು ಪಾಲಿಸುತ್ತಿರುವಾಗ ಹೇಗೆ ಬಸುರಿಯಾಗುತ್ತಾಳೆ?

ರಾಮನ್ ಕುಟ್ಟಿ ನಾಯರ್ ತಡ ಮಾಡಲಿಲ್ಲ. ಅವರು ತರಾತುರಿಯಿಂದ ಮಲಗುವ ಕೋಣೆಯತ್ತ ಧಾವಿಸಿದರು. ಅಲ್ಲಿ ರವಿ ಮತ್ತು ರಮಣಿ ಇಸ್ಪೀಟ್ ಆಟದಲ್ಲಿ ತಲ್ಲೀನರಾಗಿದ್ದರು. ಅವರು ನಾಯರ್ ಕಡೆ ತಲೆಯೆತ್ತಿ ಕೂಡ ನೋಡಲಿಲ್ಲ. ರಾಮನ್ ಕುಟ್ಟಿ ನಾಯರ್ ತುಟಿಕಚ್ಚಿ ಮನೆಯಿಂದ ಹೊರಬಂದರು. ಹೆಗಲ ಮೇಲೊಂದು ತುಂಡು ಪಂಚೆಯನ್ನು ಹಾಕಿ ಗದ್ದೆ ಬಯಲಿನತ್ತ ಹೆಜ್ಜೆ ಹಾಕಿದರು.

''ನಾಯರೇ, ಈ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಎಲ್ಲಿಗೆ ಹೋಗ್ತಿದ್ದೀರಾ?'' ನೆರೆಮನೆಯ ಪಾಪಿಯಮ್ಮ ಕೂಗಿ ಕೇಳಿದಳು. ಅವರು ಮುದುಕಿಯನ್ನು ನೋಡುತ್ತಾ ಹೇಳಿದರು, ''ಸ್ವಲ್ಪ ದೂರ ಹೋಗ್ತಾ ಇದ್ದೀನಿ, ಸದ್ಯಕ್ಕೆ ವಾಪಸ್ಸು ಬರ್ತಿಲ್ಲ''.

''ಹಾಗಾದರೆ, ಬೀಜ ಬಿತ್ತೋದು ಬೇಡ್ವಾ? ಬಿತ್ತನೆಯ ಬೀಜವನ್ನು ಕುನ್ನಂಕುಳಂದಿಂದ ತಗೊಂಬರ್ತೀನಂತ ಹೇಳಿದ್ರಲ್ಲ, ಅದನ್ನು ಬಿತ್ತದೆ ಎಲ್ಲಿಗೆ ಹೋಗ್ತೀದ್ದೀರಾ?''

''ಈ ವರ್ಷ ಬೀಜ ಬಿತ್ತೋದು ಬೇಡಂತ ನಿರ್ಧರಿಸಿದ್ದೀನಿ.''

ಅವರ ಮಾತುಗಳನ್ನು ಬಾಚಿ ತೆಗೆದ ಗಾಳಿ, ಗದ್ದೆಯಲ್ಲೆಲ್ಲ ಚೆಲ್ಲುತ್ತಿರುವಂತೆ ತೋರಿತು ಪಾಪಿಯಮ್ಮನಿಗೆ.

''ಏನೂ ಕೇಳಿಸ್ತಾ ಇಲ್ಲ ರಾಮನ್ ಕುಟ್ಟಿ ನಾಯರ್ ಅವರೆ...'' ಎಂದು ಗೊಣಗಿಕೊಂಡರು.

## ಕಮಲಾ ದಾಸ್ (1934–2009)



ಕೇರಳದ ಕಮಲಾ ದಾಸ್. ಭಾರತದ ಪ್ರಮುಖ ಲೇಖಕಿ. ಮಲಯಾಳಂ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದಿದ್ದಾರೆ. 243 ಕತೆಗಳನ್ನು, 11 ಕಾದಂಬರಿಗಳನ್ನು, ಅನೇಕ ಕವಿತೆ, ಲೇಖನಗಳನ್ನು ಬರೆದಿದ್ದಾರೆ. ಕಳೆದ ಶತಮಾನದ ಕೊನೆಗೆ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಸುದ್ದಿಯಲ್ಲಿದ್ದರು.

## ಕೆ.ಕೆ. ಗಂಗಾಧರನ್



ಹುಟ್ಟಿದ್ದು ಕೇರಳದ ಕಾಸರಗೋಡಿನ ಒಂದು ಹಳ್ಳಿಯಲ್ಲಿ. ಬೆಳೆದಿದ್ದು ಕೊಡಗಿನ ಸೋಮವಾರಪೇಟೆಯ ಕಬ್ಬಿಣಸೇತುವೆ ಎಂಬಲ್ಲಿ. ನೆಲೆಸಿರುವುದು ಬೆಂಗಳೂರಿನಲ್ಲಿ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಅವರ ಮಾತೃಭಾಷೆ ಮಲಯಾಳಂ. ಸುಮಾರು 350 ಕತೆಗಳು, ಐದು ಕಾದಂಬರಿಗಳನ್ನು ಅನುವಾದಿಸಿದ್ದಾರೆ.